

## ವೈಲ್ಡ್ ಕಾರ್ಡ್ ಪ್ರತಿಭೆ!

ಅಪ್ಪ ಕಲಿತದ್ದು ಸ್ಪೋರ್ಟ್ಸ್ ಮೆಡಿಸಿನ್; ಈಗ ಮಗಳ ಉಪಯೋಗಕ್ಕೆ ಬಂದಿರುವುದೂ ಅದೇ. ಕಳೆದ ಮೂರು ವರ್ಷಗಳಲ್ಲಿ ಮೂರು ಬಾರಿ ಗಾಯಗೊಂಡು ವಿಶ್ರಾಂತಿ ಪಡೆದಿರುವ ಸಬಿನ್ ಲಿಸಿಕಿ ಅಪ್ಪನ ತರಬೇತಿಯಿಂದಲೇ ಬೇಗ ಗುಣಮುಖಳಾಗಿ ಬಹುದೊಡ್ಡ ಟೆನಿಸ್ ಟೂರ್ನಿಗಳಲ್ಲಿ ಅಚ್ಚರಿಯ ಫಲಿತಾಂಶಗಳನ್ನು ನೀಡುತ್ತಿದ್ದಾಳೆ. ಕಳೆದ ವಾರ ನಡೆದ 2013ರ ವಿಂಬಲ್ಡನ್ ಟೂರ್ನಿಯಲ್ಲೂ ಸಿಂಗಲ್ಸ್ ಫೈನಲ್ ತಲುಪಿ, ಎರಡು ಸೆಟ್‌ಗಳ ಹೋರಾಟದಲ್ಲಿ ಮರಿಯನ್ ಬರ್ಟೋಲಿ ಎದುರು ಸೋಲು ಕಂಡಿದ್ದಾಳೆ. 2006ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಸನ್‌ಫೀಸ್ಟ್ ಟೂರ್ನಿಯಲ್ಲಿ ಭಾರತದ ಸನಾ ಬಾಂಬ್ರಿ ವಿರುದ್ಧವೂ ಸೋಲು ಕಂಡಿದ್ದ ಲಿಸಿಕಿ, ನಂತರದ ಆರು ವರ್ಷಗಳಲ್ಲಿ ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಫೈನಲ್‌ಗೇರುವಷ್ಟು ಸಾಮರ್ಥ್ಯ ಗಳಿಸಿದ್ದಾಳೆಂದರೆ ಅಚ್ಚರಿಯ ಸಾಧನೆಯೇ. ಏಗನ್ ಕ್ಲಾಸಿಕ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು ವಿಂಬಲ್ಡನ್‌ಗೆ ವೈಲ್ಡ್ ಕಾರ್ಡ್ ಎಂಟ್ರಿ ಗಳಿಸಿದ್ದ ಈಕೆ, ಮೂರನೇ ಸುತ್ತಿನಲ್ಲೇ ಔಟ್ ಆಗಬಹುದೆಂಬ ತಜ್ಞರ ನಿರೀಕ್ಷೆ ಸುಳ್ಳಾಗಿದೆ.

ಲಿಸಿಕಿಯ ಬಾಲ್ಯ ಬಡತನದ್ದೇ ಆಗಿತ್ತು. ಪೋಲೆಂಡಿನಿಂದ ಜರ್ಮನಿಗೆ ವಲಸೆ ಹೋದ ಆಕೆಯ ಹೆತ್ತವರು, ಮಗಳನ್ನು ಟೆನಿಸ್ ತಾರೆಯಾಗಿಸಲು ಹಗಲೂ ರಾತ್ರಿ ದುಡಿದರು. ಯೂರೋಪಿನ ದೇಶಗಳ ಟೂರ್ನಿಗಳಲ್ಲಿ ಭಾಗವಹಿಸಲು ವಿಮಾನ ಟಿಕೆಟ್‌ಗೆ ದುಡ್ಡಿಲ್ಲದೆ ರಸ್ತೆಯಲ್ಲೇ ಪಯಣಿಸುತ್ತಿದ್ದ ಈಕೆ ಅಮೆರಿಕದ ಫ್ಲೋರಿಡಾದಲ್ಲಿ ತರಬೇತಿಗೆ ಸಿಕ್ಕ ಅವಕಾಶವನ್ನು ಚೆನ್ನಾಗಿಯೇ ಬಳಸಿಕೊಂಡಳು. ಭಾರೀ ವೇಗದ ಸರ್ವಿಸ್ ಮತ್ತು ಗ್ರೌಂಡ್‌ಸ್ಟ್ರೋಕ್‌ಗಳಿಂದಾಗಿ ಈಕೆಗೆ ಟೆನಿಸ್ ವಲಯದಲ್ಲಿ 'ಬೂಂ ಬೂಂ' ಎಂಬ ಅಡ್ಡಹೆಸರು ಬಂದಿದೆ. ಮುಂಗೈ ಮತ್ತು ಹಿಂಗೈ ಎರಡರಲ್ಲೂ ಬಲಶಾಲಿ ಹೊಡೆತಗಳಿಗೆ ಹೆಸರುವಾಸಿಯಾಗಿರುವ ಲಿಸಿಕಿ, ಬೇಸ್‌ಲೈನ್‌ನಲ್ಲಿ ಓಡಾಡಿಯೇ ಎದುರಾಳಿಗಳನ್ನು ಮಣಿಸಬಲ್ಲವಳು. ಈಕೆಯ ಆಟ ಸ್ಟೆಫಿಗ್ರಾಫ್‌ಳ ಆಟವನ್ನು ಹೋಲುತ್ತದೆ ಎನ್ನುವುದು ತಜ್ಞರ ಮಾತು.

2007ರಲ್ಲಿ ಎಟಿಪಿ ರ‍್ಯಾಂಕಿಂಗ್‌ನಲ್ಲಿ 497ನೇ ಸ್ಥಾನ ಪಡೆದಿದ್ದ ಲಿಸಿಕಿ, 2012ರಲ್ಲಿ 12ನೇ ರ‍್ಯಾಂಕ್‌ಗೆ ಏರಿದ್ದು ಅಪೂರ್ವ ಸಾಧನೆ. ಕಳೆದ ವರ್ಷ ಹಲವು ಸಲ ಮೀನಖಂಡದ ಸೆಳೆತದಿಂದ ಬಳಲಿ ಚಿಕಿತ್ಸೆ ಪಡೆದರೂ ವಿಂಬಲ್ಡನ್‌ನಲ್ಲಿ ಫೀನಿಕ್ಸ್‌ನಂತೆ ಮೇಲೆದ್ದು ಬಂದಿದ್ದಾಳೆ. ಇನ್ನೂ 24ರ ಹರೆಯದ ಲಿಸಿಕಿ (ಬರ್ತ್‌ಡೇ 22-9-1989) ಭವಿಷ್ಯದಲ್ಲಿ ವಿಂಬಲ್ಡನ್ ಸಹಿತ ಹಲವು ಗ್ರ್ಯಾನ್‌ಸ್ಲಾಮ್‌ಗಳನ್ನು ಗೆಲ್ಲುವ ಪೂರ್ವಸೂಚನೆಗಳಿವೆ.

## ಎದೆಗಾರ ಸ್ನೋಡೆನ್



ದೇಶ ಯಾವುದೇ ಇರಬಹುದು– ಸತ್ಯವಂತರಿಗಿದು ಕಾಲವಲ್ಲ ಎನ್ನುವುದು ನಿಜ. ಅಮೆರಿಕದ ರಾಷ್ಟ್ರೀಯ ಭದ್ರತಾ ಏಜೆನ್ಸಿಯ ಮಾಜಿ ನೌಕರ ಎಡ್ವರ್ಡ್ ಸ್ನೋಡೆನ್‌ನ ವಿಷಯದಲ್ಲೂ ಇದು ನಿಜವಾಗಿದೆ. 'ಜಗತ್ತಿನ ದೊಡ್ಡಣ್ಣ' ಅಮೆರಿಕದ 'ಮೂರನೇ ಕಣ್ಣಿ'ಗೆ ಸಿಲುಕಿರುವ ಸ್ನೋಡೆನ್ ನೆಲೆ ನಿಲ್ಲಲೊಂದು ಭೂಮಿ ಸಿಗದೆ ದೇಶಾಂತರ ಅಲೆದಾಡುತ್ತಿದ್ದಾನೆ. ಆತನನ್ನು ಅಮೆರಿಕಕ್ಕೆ ಹೆಡೆಮುರಿ ಕಟ್ಟಿ ಎಳೆತರಲು ಒಬಾಮಾ ಆಡಳಿತ ತುದಿಗಾಲಲ್ಲಿ ನಿಂತಿದೆ.

'ಅಮೆರಿಕವು ಜಗತ್ತಿನ ಎಲ್ಲ ದೇಶಗಳ ರಹಸ್ಯಗಳನ್ನು ಅಂತರ್ಜಾಲಗಳ ಮೂಲಕ ಕದ್ದು ನೋಡುತ್ತಿದೆ' ಎಂದು ಸ್ನೋಡೆನ್ ಹೇಳಿದ್ದೇ ಅಪರಾಧವಾಗಿದೆ. 'ದಿ ಗಾರ್ಡಿಯನ್' ಪತ್ರಿಕೆಯಲ್ಲಿ ಅಮೆರಿಕದ ಈ ಕಳ್ಳಾಟಗಳನ್ನು ಬಯಲಿಗೆ ಎಳೆದ ಸ್ನೋಡೆನ್, ಆರಂಭದಲ್ಲಿ ಅಮೆರಿಕದ ಸೇನೆಯಲ್ಲಿದ್ದ. ಇನ್ನೇನು ಇರಾಕ್ ಯುದ್ಧದಲ್ಲಿ ಭಾಗವಹಿಸಬೇಕು ಎನ್ನುವಾಗಲೇ ತರಬೇತಿಯಲ್ಲಿ ನಡೆದ ಅಪಘಾತದಲ್ಲಿ ಈತ ಎರಡೂ ಕಾಲುಗಳನ್ನು ಫ್ರಾಕ್ಚರ್ ಮಾಡಿಕೊಂಡ. ಸೇನೆಯಿಂದ ಹೊರಬಂದ ಈತನಿಗೆ ಸಿಐಎ ಕೆಲಸ ಕೊಟ್ಟಿತ್ತು. ಕಂಪ್ಯೂಟರ್‌ನೊಳಕ್ಕೆ ಕನ್ನ ಹಾಕಿ ಮಾಹಿತಿ ಕದಿಯುವುದರಲ್ಲಿ 'ಭಪ್ಪರೆ' ಎನ್ನಿಸಿಕೊಂಡಿರುವ ಈತನ ಸೇವೆಯನ್ನು ಅಮೆರಿಕದ ರಾಷ್ಟ್ರೀಯ ಭದ್ರತಾ ಏಜೆನ್ಸಿಯೂ ಕಂಟ್ರಾಕ್ಟ್ ಕೊಟ್ಟು ಬಳಸಿಕೊಂಡಿತು. ಆ ಕೆಲಸ ಬಿಟ್ಟ ಬಳಿಕ ಈಗ ಸತ್ಯ ಹೇಳಿದ್ದೇ ಈತನಿಗೆ ಮುಳುವಾಗಿದೆ.

ಚೀನಾ, ರಶ್ಯಾ, ಭಾರತ ಸಹಿತ ಜಗತ್ತಿನ ಯಾವ ದೇಶಗಳೂ ಈತನಿಗೆ ಆಶ್ರಯ ಕೊಡಲು ಸಿದ್ಧವಿಲ್ಲ. ಈ ಟಿಪ್ಪಣಿ ಬರೆಯುವ ಹೊತ್ತಿಗೆ ರಶ್ಯಾದ ಗಡಿಯ 'ತಟಸ್ಥ ಪ್ರದೇಶ'ದ ವಿಮಾನ ನಿಲ್ದಾಣವೊಂದರಲ್ಲಿ ಸ್ನೋಡೆನ್ ಆಶ್ರಯ ಪಡೆದಿದ್ದಾನೆ. ಹಿಂದೆ ಬಸ್ ಚಾಲಕನಾಗಿದ್ದು, ಚುನಾವಣೆಯಲ್ಲಿ ವೆನೆಜುವಲಾದ ಅಧ್ಯಕ್ಷನಾಗಿರುವ ನಿಕೋಲಾಸ್ ಮಡುರೊ ಈತನನ್ನು ತನ್ನ ದೇಶಕ್ಕೆ ಕರೆದಿದ್ದಾನೆ. ಅಲ್ಲಿಗೆ ಹೋಗಬೇಕೆಂದರೆ ಹವಾನಾ ಮೂಲಕವಷ್ಟೇ ದಾರಿ. ಆದರೆ ಹವಾನಾಕ್ಕೆ ಕಾಲಿಟ್ಟರೆ ಬಂಧನ ಖಚಿತ! ಜಪಾನಿನಲ್ಲಿ ಕೆಲಸ ಮಾಡುತ್ತಿದ್ದಾಗ ಬೌದ್ಧ ಧರ್ಮ ಸ್ವೀಕರಿಸಿದ, 30ರ ಹರೆಯದ ಎದೆಗಾರ ಸ್ನೋಡೆನ್ ಅಮೆರಿಕವನ್ನು ಎದುರು ಹಾಕಿಕೊಂಡು ಹೇಗೆ ಬದುಕುತ್ತಾನೆ ಎನ್ನುವುದನ್ನು ಜಗತ್ತಿನ ಅಭಿವ್ಯಕ್ತಿ ಸ್ವಾತಂತ್ರ್ಯಪ್ರಿಯರೆಲ್ಲರೂ ಅಸಹಾಯಕತೆಯಿಂದ ನೋಡುತ್ತಿದ್ದಾರೆ. ಇರಾಕ್‌ನಲ್ಲಿ ಮಿಲಿಟರಿ ಪ್ರಭುತ್ವದ ಹೆಸರಿನಲ್ಲಿ ಸದ್ದಾಂ ಹುಸೇನ್ ಮಾಡಿದ್ದನ್ನೇ, ಈಗ ಪ್ರಜಾಪ್ರಭುತ್ವದ ಹೆಸರಿನಲ್ಲಿ ಬರಾಕ್ ಒಬಾಮಾ ಮಾಡುತ್ತಿರುವುದು ನಿಜಕ್ಕೂ ವಿಪರ್ಯಾಸದ ಸಂಗತಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65